OS – 003

# I Semester B.Com. Examination, October/November 2012
## (Fresher + Repeaters Scheme)
## (2011-12 & Onwards)
## KANNADA LANGUAGE – I
## Sahithya Sallapa – I

Time : 3 Hours Max. Marks : 100

I. 1) ಈ ಪದ್ಯದ ಭಾವಾರ್ಥವನ್ನು ಬರೆಯಿರಿ : (1×6=6)

ಗೆಲಿದು ಕೊಟ್ಟೆನು ಸಕಲ ಚಾತು

ರ್ಬಲವನಾ ಭಂಡಾರ ಸಹಿತ

ಗ್ಗಳೆಯರೈವರ ಕಮಲಮುಖಿಯನು ರಾಜ್ಯ ಸಿರಿ ಸಹಿತ

ಕಲಶವಿಟ್ಟೆನು ಕೊಟ್ಟ ಭಾಷೆಗೆ

ಎಲೆ ಸುಯೋಧನಯೆಂದು ನಯನಾಂ

ಗುಲಿಯ ಸಂಕೇತದಲಿ ಸನ್ನೆಯ ಮಾಡಿದನು ಶಕುನಿ.

2) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : (2×3=6)

ರಗಳೆ, ಫಳಾರ, ಕುವೆಂಪು, ರಜಾಕಾರರು.

II. 1) ಇವುಗಳಲ್ಲಿ ಐದು ಪದಗಳಿಗೆ ಮೂಲ ಪದಗಳನ್ನು ಬರೆಯಿರಿ : (5×1=5)

ಮಾರಾಯ, ಪ್ಯಾಟಿ, ಕುಲ್ಡಿ, ಹಸಾದ, ಸಿರಿ, ವಂಸ, ಯಾಸ.

2) ಐದು ಪದಗಳಿಗೆ ಅರ್ಥ ಬರೆಯಿರಿ : (5×1=5)

ಮುಗಿಲು, ತೊತ್ತು, ಭೂಪಾಲ, ಖಿತಿ, ದ್ಯೂತ, ಕಿಸೆ, ಅಚ್ಯುತ.

3) ಐದು ಪದಗಳನ್ನು ಬಿಡಿಸಿ ಬರೆಯಿರಿ : (5×1=5)

ಪೀತಾಂಬರ, ನಯನಾಂಗುಲಿ, ಸಾಕ್ಷಿಯುಂಟೆ, ಭೀಮಾರ್ಜುನ, ತಂಗುಳನ್ನ, ಕೆಂಗಣ್ಣು, ಕೌರವಾನುಜ.

4) ಕಮಲಮುಖಿ, ಮೀನಾಕ್ಷಿ–ಈ ಮಾದರಿಯ ಐದು ಪದಗಳನ್ನು ಸ್ವಂತವಾಗಿ ರಚಿಸಿ. (5×1=5)

III. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ: **(4×5=20)**

1) 'ಕಲ್ಕಿ' ಕವನದಲ್ಲಿ ಕಂಡುಬರುವ ಕನಸನ್ನು ವಿವರಿಸಿ.

2) ಚಿನ್ನಮ್ಮ ಮತ್ತು ಆಕೆಯ ಕುಟುಂಬಕ್ಕೆ ಹೊಳೆಯ ಬಗ್ಗೆ ಅಸಹನೆ, ಕೋಪ ಉಂಟಾಗಲು ಕಾರಣವೇನು ?

3) ವೃದ್ಧ ಮಾಹೇಶ್ವರನ ಚೇಷ್ಟೆ ಮತ್ತು ನಂಬಿಯಣ್ಣನ ಸಿಟ್ಟು – ಇವು 'ವೃದ್ಧಮಾಹೇಶ್ವರ ಲೀಲೆ' ಯಲ್ಲಿ ಹೇಗೆ ಚಿತ್ರಿಸಲ್ಪಟ್ಟಿವೆ ? ವಿವರಿಸಿ.

4) ಕರಿಯರ ನಿರ್ಬಂಧಕ್ಕಾಗಿ ಬಿಳಿಯರು ರೂಪಿಸಿದ ಕಾನೂನುಗಳಾವುವು ?

5) ನೂರರ ಇಪ್ಪತ್ತು ನೋಟುಗಳು ಕಳೆದುಹೋದ ಪ್ರಸಂಗವನ್ನು ಚಿತ್ರಿಸಿ.

6) ''ಸೀಸರನ ಜೊತೆ ನನ್ನ ಹೃದಯ ಶವದ ಪೆಟ್ಟಿಗೆಯಲ್ಲಿದೆ'' ಎಂದು ಆಂಟೊನಿ ಹೇಳುವ ಸಂದರ್ಭವನ್ನು ವಿವರಿಸಿ.

IV. ಇವುಗಳಿಗೆ ವಿವರವಾಗಿ ಉತ್ತರಿಸಿ : **(4×12=48)**

1) ಅಸಮಾನತೆ ಮತ್ತು ಅದರ ಬಗೆಗಿನ ಅಸಹನೆ 'ಕಲ್ಕಿ' ಕವಿತೆಯಲ್ಲಿ ಚಿತ್ರಣಗೊಂಡಿರುವ ಬಗೆಯನ್ನು ವಿವರಿಸಿ.

ಅಥವಾ

''ಶ್ರೀಮುಡಿಗೆ ಕೈಯಿಕ್ಕಿದನು'' ಕಾವ್ಯಭಾಗದ ದ್ರೌಪದಿಯ ಪಾತ್ರವನ್ನು ಚಿತ್ರಿಸಿ.

2) 'ಗಾಂಧಿ ಚಿತ್ರದ ನೋಟು' ಕತೆಯ ವೈಶಿಷ್ಟ್ಯವೇನು ? ವಿವರಿಸಿ.

ಅಥವಾ

ರಜಾಕಾರರು ನಡೆಸಿದ ದೌರ್ಜನ್ಯವನ್ನು ನಿಜಾಮ ಪ್ರೋತ್ಸಾಹಿಸಲು ಕಾರಣವೇನು ? ವಿವರಿಸಿ.

3) ಜನಾಂಗಭೇಧ ಕುರಿತ ದೇವನೂರ ಮಹಾದೇವ ಅವರ ಅನಿಸಿಕೆಗಳನ್ನು ವಿಶ್ಲೇಷಿಸಿ.

ಅಥವಾ

'ಬೆಂಗ್ಳೂರ್ ಅತ್ತೆಮ್ಮನ ಫಳಾರ' ದಲ್ಲಿ ಕಂಡು ಬರುವ ವಿಡಂಬನೆಯ ಸ್ವರೂಪವನ್ನು ಸ್ವಾರಸ್ಯ ಕೆಡದಂತೆ ವಿವರಿಸಿ.

4) ಬ್ರೂಟಸ್ ಕೂಡ ಒಬ್ಬ ಅದ್ಭುತ ಭಾಷಣಕಾರ– ಹೇಗೆ ? ಸ್ಪಷ್ಟಪಡಿಸಿ.

ಅಥವಾ

ಆಂಟೊನಿ, ಸೀಸರ್, ಕವಿ ಸಿನ್ನ – ಇವರಲ್ಲಿ ಇಬ್ಬರ ಪಾತ್ರ ಪರಿಚಯ ಮಾಡಿಕೊಡಿ.

---